
# ಗುರುಪ್ರಸಾದ ಕಾಗಿನೆಲೆ



ನನಗೆ ಆಗ ಬಳ್ಳಾರಿಯ ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್ ಸೀಟು ಸಿಕ್ಕಿತ್ತು. ಕಾಲೇಜಿನಲ್ಲಿ ಅಡ್ಮಿಶನ್ ಪ್ರಕ್ರಿಯೆ ಭರದಿಂದ ನಡೆದಿತ್ತು. ನಾಲ್ಕೂವರೆ ಇಂಚು ಅಂಗಾರ, ಶಿಖೆಯ ನಡುವಿನ ಬಕ್ಕತಲೆಯನ್ನು ಸವರುತ್ತಲೇ ಗುಮಾಸ್ತ ರಾಘವಾಚಾರಿ ನನ್ನ ಅಂಕಪತ್ರ, ಬರ್ತ್ ಸರ್ಟಿಫಿಕೇಟು ಇತರೇ ಎಲ್ಲ ದಾಖಲೆಗಳನ್ನೂ ಮಡಿಹೆಂಗಸರಂತೆ ಮುಟ್ಟದೇ ನನ್ನ ಕೈಯಲ್ಲಿದ್ದ ಹಾಗೇ ಪರಿಶೀಲಿಸಿ, ಒಂದು ದೊಡ್ಡ ಕವರಿನಲ್ಲಿ ಹಾಕಿಸಿ ಅದನ್ನು ಸೀಲ್ ಮಾಡಿಸಿ ಇಸಕೊಂಡು 'ರಿಸೀವ್ಡ್ ಒನ್ ಲಾರ್ಜ್ ಎನ್ವಲಪ್. ಕಂಟೆಂಟ್ಸ್ ನಾಟ್ ನೋನ್' ಎಂದು ರಸೀತಿ ಕೊಟ್ಟಿದ್ದ. ಬಳ್ಳಾರಿಯ ಬಿಸಿಲನ್ನು ಮೊದಲ ಬಾರಿ ಅನುಭವಿಸಿ ರಸವೆಲ್ಲ ಇಳಿದುಹೋಗಿದ್ದ ನಮ್ಮಪ್ಪನ ಟೆಂಪರೇಚರ್ ರಾಘವಾಚಾರಿಯ ಈ 'ನಾಟ್ ನೋನ್' ಸ್ವೀಕೃತಿಯಿಂದ ಏಕ್ದಂ ಏರಿತ್ತು. ಆತನೇ ಎಲ್ಲ ದಾಖಲೆಗಳನ್ನೂ ಬಿಡಿಸಿಸಿ, ಬಿಡಿಸಿಸಿ ನೋಡಿದ್ದಾನೆ. ಈಗ ಒಳಗೇನಿದೆ ಗೊತ್ತಿಲ್ಲ ಅಂದರೆ. ಹತ್ತಿರ ಹೋದರೆ ಮೂರಡಿ ದೂರ ಹಾರುತ್ತಾನೆ 'ಕಂಟೆಂಟ್ಸ್ ನಾಟ್ ನೋನ್ ಅಂದ್ರೆ ಏನ್ರೀ. ನೀವೇ ಒಂದೊಂದಾಗಿ ನೋಡಿ ಈ ಕವರಲ್ಲಿ ಹಾಕಿದ್ದೀರ. ಬೇಕಾದರೆ ಕವರ್ ಬಿಚ್ಚಿ ಇನ್ನೊಮ್ಮೆ ನೋಡಿ. ನನ್ನ ಹತ್ತಿರ ಇನ್ನೊಂದು ಕವರ್ ಇದೆ. ಇಷ್ಟಕ್ಕೂ ಹತ್ತಿರ ಬಂದರೆ ಯಾತಕ್ಕೆ ಹಂಗೆ ಹಾರಿಹೋಗ್ತೀರಿ. ನಿಮಗಿಂತ ಚೆನ್ನಾಗಿ ಅಂಗಾರ ಹಾಕ್ತೀವಿ ನಾವು' ಎಂದು ಅವರ ಯಕ್ಷಿಣೀ ಚೀಲದಿಂದ ಇನ್ನೊಂದು ದೊಡ್ಡ ಕವರನ್ನು ತೆಗೆದರು. 'ಕಂಟೆಂಟ್ಸ್ ನಾಟ್ ನೋನ್ ಅಂತ ರಸೀತಿ ಕೊಡೋದು ನಮ್ಮ ಪ್ರೊಸೀಜರು. ನಾವು ಏನೇ ವೆರಿಫೈ ಮಾಡಿದ್ರೂ ಆಮೇಲೇನಾದರೂ ಡಾಕ್ಯುಮೆಂಟ್ಸ್ ಕಳೆದುಹೋದ್ರೆ ನಾವು ಎಲ್ಲದರ ಜವಾಬ್ದಾರಿ ತಗೊಳ್ಳೋಕೆ ಆಗುತ್ತಾ? ನಡಿ ನಡೀರಿ. ನಿಮ್ದೊಳ್ಳೆ ಆಯ್ತು. ಅಷ್ಟಕ್ಕೂ ನೋಡಿದ್ರೆ ಗೊತ್ತಾಗೊಲ್ವೇ, ನಮ್ಮವರು ಅಂತ. ಮಠ ಬೇರೆ, ಪ್ರೊಸೀಜರು ಬೇರೆ' ಎಂದು ಅಪ್ಪನ ಅಂಗಾರಕ್ಕೆ ಮೂರುಕಾಸು ಬೆಲೆಕೊಡದೇ ಹೊರಕಳಿಸಲು ನೋಡಿದ. ಅಪ್ಪ ತಕ್ಷಣ ಇನ್ನೊಂದು ಬಿಳಿ ಹಾಳೆಯಲ್ಲಿ 'ಕಂಟೆಂಟ್ಸ್ ವೆರಿಫೈಡ್ ಅಂಡ್ ಸೀಲ್ಡ್ ಇನ್ ದ ಎನ್ವಲಪ್ ಬೈ ಶ್ರೀ ರಾಘವಾಚಾರಿ' ಎಂದು ತಾವೇ ಬರೆದು ಆತನಿಗೆ ಸಹಿ ಹಾಕಲು ಕೇಳಿದ್ದರು. ಆತ ಸುತಾರಾಂ ಸಹಿ ಹಾಕಲು ಒಪ್ಪದೇ ಇದ್ದಾಗ 'ರೆಫ್ಯುಸ್ಡ್ ಟು ಸೈನ್' ಎಂದು ಬರೆದು ತಾವೇ ಕೆಳಗೆ ಸಹಿ ಹಾಕಿ ಕೆಳಗೆ ಎರಡು ಚುಕ್ಕಿಯನ್ನು ಬಲವಾಗಿ ಒತ್ತಿ, ಪತ್ರವನ್ನು ಆತನ ಮುಂದೆಯೇ ಹೆದರಿಸುವಂತೆ ಮಡಿಸಿ ಸ್ಟೈಲಾಗಿ ಜೇಬಿನಲ್ಲಿಟ್ಟುಕೊಂಡಿದ್ದರು. ಅವರು ಆ ಪತ್ರವನ್ನು ಜೇಬಿನಲ್ಲಿಟ್ಟಿಕೊಳ್ಳುವ ಮತ್ತು ಅವರ ಫೌಂಟನ್ ಪೆನ್ನಿಗೆ ಕ್ಯಾಪ್ ವಾಪಸ್ ಹಾಕುವ ಶೈಲಿ, ಶತ್ರುವಿಗೆ ಗುಂಡು ಹೊಡೆದು ಬಂದೂಕಿನ